

ಒಂಬತ್ತರ ಭೋಂಗಾ "ಭೋಂ..." ಎಂದು ಕೂಗಿದಾಗ ಎಚ್ಚರವಾಯಿತು. ಮಗ್ಗಲು ಬದಲಾಯಿಸಿ ಮತ್ತೆ ಮಲಗಿದೆ. ಹೌದು, ಇದೀಗ ಒಂಬತ್ತು ಗಂಟೆ. ರಾತ್ರಿ ಪಾಳಿಯ ಜನ ಶುಗರ್ ಫ್ಯಾಕ್ಟರಿಗೆ ಹೊರಟಿದ್ದಾರೆ. ಎಂಟಕ್ಕೆ ಮಲಗಿದವಳಿಗೆ ಜೋಂಪು ಹತ್ತಿತ್ತು. ಮನೆಯಲ್ಲಿ ನಡೆಯುತ್ತಿದ್ದ ನಾಟಕವೆಲ್ಲ ನೆನಪಿಗೆ ಬಂತು. ಎಂಥ ಸಂದಿಗ್ಧ ಪರಿಸ್ಥಿತಿಯಲ್ಲಿ ನಡುನೀರಿನಲ್ಲಿ ನಿಂತುಬಿಟ್ಟಿದ್ದೇನೆ. ಹತ್ತಿರದ ದಡಕ್ಕೆ ಹೋಗಲಾಗುತ್ತಿಲ್ಲ. ದೂರದ ದಡ ಕಾಣದೇ ವಂಚಿಸುತ್ತಿದೆ. ಕಂಡರೂ ಸೇರುವ ಭರವಸೆಯಿಲ್ಲ. ಒಟ್ಟಿನಲ್ಲಿ ಪರದೇಶಿಯಂತೆ.

ಬಾಗಿಲು 'ಕೀಂ...' ಎಂದು ಸದ್ದು ಮಾಡಿತು. ಹೊರಳಿ ನೋಡಿದಾಗ, "ರುಕ್ಕು, ಇನ್ನೂ ನಿದ್ದಿ ಬಂದಿಲ್ಲೇನು?" ಎಂದು ರಾಧಾವ್ವೈನಿ ಇಣುಕಿ ಕೇಳಿದರು. "ಹತ್ತಿತ್ತು ವೈನಿ. ಈಗ ಎಚ್ಚರಾತು ನೋಡ್ರಿ" ಎಂದೆ. "ಅಯ್ಯ... ಹಂಗಾರ ಮಲಕೊ. ಕನಸು ಕಾಣು. ಗಂಡ ಬರ್ಲಿಕ್ಕತ್ತಾನಲಾ... ಮುಂಬೈಕ್ಕ ಹೋಗಬೇಕಲಾ?... ಜೋರಾತು" ಎಂದು ಹುಸಿನಗುತ್ತ ಬಾಗಿಲು ಎಳೆದುಕೊಂಡು ಹೋದರು. ಎದೆಯ ನೋವು ಭುಗಿಲ್ಲೆಂದಿತು. ಸುಳ್ಳು... ಕ್ಷಣಕ್ಷಣಕ್ಕೂ ಸುಳ್ಳು ಹೇಳುತ್ತ ಮುಖವಾಡ ಧರಿಸಿ ಬದುಕುವ ಬವಣೆ ಯಾರಿಗೂ ಬೇಡ. ಮಕ್ಕಳು, ಮನೆಯವರ ಮುಂದೆ ಅಳುತ್ತ ಸಸಾರವಾಗಬಾರದು. ಭಾವನೆಗಳನ್ನು ತೋರ್ಪಡಿಸಿಕೊಳ್ಳಬಾರದು ಎಂದುಕೊಳ್ಳುತ್ತ ಕ್ಲೇಶಗಳನ್ನೆಲ್ಲ ಮುಚ್ಚಿಟ್ಟುಕೊಳ್ಳುವುದು... ಅಲ್ಲೆ ಹತ್ತಿಕ್ಕುವುದು... ಮುಗುಳ್ನಗೆಯ ಮುಖವಾಡ ಧರಿಸಿ ಕೆಲಸದಲ್ಲಿ ಮೈಮರೆತುಬಿಡುವುದು. ನೆಮ್ಮದಿಯಾಗಿದ್ದು ಎಷ್ಟು ದಿನಗಳಾದವೋ? ಹೊಟ್ಟೆಯಲ್ಲಿ ಕಲಮಲವಾದಂತೆ ಭಾಸ. ಎಲ್ಲ ಹೆದರಿಕೆಗೆಂದು ಗೊತ್ತು. ಈಗಾಗಲೇ ಮೂರು ಬಾರಿ ಸಂಡಾಸಿಗೆ ಹೋಗಿ ಬಂದಿದ್ದೇನೆ. ಈಗ ಮತ್ತೆ ಹೊಟ್ಟೆಯಲ್ಲಿ ಢಳಮಳವಾಗುತ್ತಿದೆ. ಏನಾದರಾಗಲಿ, ಒಮ್ಮೆ ಜಾಜಿಕಾಯಿ ತೆಗೆದುಕೊಂಡರಾಯಿತೆಂದು ಎದ್ದು ಅಡಿಗೆಮನೆಯತ್ತ ನಿಧಾನವಾಗಿ ನಡೆದೆ. ಮಂದ ಬೆಳಕಿನಲ್ಲಿ ಡಬ್ಬದಿಂದ ಜಾಜಿಕಾಯಿಯ ತುಣುಕೊಂದನ್ನು ಎತ್ತಿಕೊಂಡು ಒಣಕೊಬ್ಬರಿಯ ಚೂರಿಗಾಗಿ ಹುಡುಕಿದಾಗ ನಿನ್ನೆ ತುರೇಮಣೆಯ ಜೊತೆಗೆ ಪಡಸಾಲೆಯಲ್ಲಿಟ್ಟ ನೆನಪಾಯಿತು. ಕತ್ತಲಲ್ಲೇ ಮೆಲ್ಲಗೆ ಹೆಜ್ಜೆ ಹಾಕಿದೆ. ಇನ್ನೇನು ಲೈಟಿನ ಸ್ವಿಚ್ಚು ಅದುಮಬೇಕು ಎನ್ನುವಾಗ ರಾಧಾವ್ವೈನಿಯ ದನಿ ತೂರಿಬಂತು. "ನೀವು ಭಾಳ ಸಂಭಾಯತ ಇದ್ದೀರಿ. ಕೋಲೆ ಬಸವನಗತೆ ಎಲ್ಲಾದಕ್ಕೂ ತಲಿ ಆಡಸಬ್ಯಾಡ್ರಿ. ಇಕಾ ನಾ ಹೇಳಿಟ್ಟೇನಿ. ನಾಳೆ ರುಕ್ಕುನ ಗಂಡ ಕೃಷ್ಣಾಜಿ ಬರ್ತಾನಂತ. ಅಂವಗ ಸ್ಪಷ್ಟ ಹೇಳಿಬಿಡ್ರಿ. 'ಇದು ನಿಮ್ಮ ವಸ್ತು. ನಿಮ್ಮ ಮನಿಗೆ ಕರಕೊಂಡ್ಹೋಗ್ರಿ. ಛೊಲೊತ್ನಾಗಿ ನೋಡಕೋರಿ... ಇಲ್ಲಾ ಕಡದು ಬುಟ್ಟಿ ತುಂಬಿಡ್ರಿ. ನಮಗ್ಗೊತ್ತಿಲ್ಲ. ಕರಕೊಂಡಂತೂ ಹೋಗ್ರಿ' ಅಂದಬಿಡ್ರಿ. ನಾನೂ